ಮಗನೊಟ್ಟಿಗೆ ನನ್ನ ಮದುವೆ ನಿಶ್ಚಯಮಾಡಿಕೊಂಡಿದ್ದರು. ಬಾಯಿ ಮಾತಿಗೆ ನಂಬದೆ, ನಾಮಕರಣದ ದಿನ ತೊಟ್ಟಿಲಿಗೆ ಬಟ್ಟೆ ಹಾಸಿ, ವಾಹನಗಳ ಸೀಟ್‌ನಂತೆ ನನ್ನನ್ನು ರಿಸರ್ವ್ ಮಾಡಿಕೊಂಡಿದ್ದರು" ಎಂದವಳ ಮಾತು ತುಂಡರಿಸಿ, "ಒಂಥರಾ ಬಾಲ್ಯವಿವಾಹ" ಎಂದೆ. ನಾನು ನಡುವೆ ಬಾಯಿ ಹಾಕಿದ್ದಕ್ಕೆ ಅವಳು ಬೇಸರ ವ್ಯಕ್ತಪಡಿಸುತ್ತಾ, "ಸೆಂಟ್ರಲ್ಲಿ ಮಾತ್ಬೇಡಿ. ಹೇಳ್ತೀನಿ" ಎಂದು ಮುಂದುವರಿಸಿದಳು. "ಹುಟ್ಟುವಾಗ್ಲೆ ಮದುವೆ ನಿಶ್ಚಯವಾಗಿದ್ದರಿಂದ ಅವ್ನು ಊರಿಗೆ ಬಂದಾಗ ಅಕ್ಕಪಕ್ಕದ ಮನೆಯ ಹೆಂಗಸರು, ನನ್ನದೆ ವಯಸ್ಸಿನ ಹುಡುಗಿಯರು 'ನಿನ್ಗಂಡ ಬಂದ' ಎಂದು ರೇಗಿಸುವಾಗ ನಾಚಿ ಕೆಂಪಾಗುತ್ತಿದ್ದ ಕೆನ್ನೆ ಯೌವನಕ್ಕೆ ಕಾಲಿಡುತ್ತಿದ್ದಂತೆ ಅವ್ನು ಬಂದ್ರೆ ಬಣ್ಣ ಕಳೆದುಕೊಂಡು ಬಿಳುಚಿಕೊಂಡು ಬಿಡುತ್ತಿದ್ದವು. ಕಾರಣ, ಅವ್ನು ಜೊಲ್ಲುಸುರಿಸುವವನಂತೆ ನನ್ನ ದೇಹದತ್ತ ನೋಡುತ್ತಿದ್ದ." ಈಗ ನನ್ನಿಂದ ತಡೆದುಕೊಳ್ಳಲು ಆಗದೆ, "ನಿಮ್ಮನ್ನು ಮದ್ವೆಯಾಗೋನು ನಿಮ್ಮನ್ನ ನೋಡಿದ್ರೆ ಅದ್ಹೇಗೆ ಜೊಲ್ಲಾಗುತ್ತೆ? ಅದು ಪ್ರೀತಿ ಯಾಕಾಗಲ್ಲ?" ಎಂದೆ. "ಅವ್ನಿಗೆ ಹೃದಯ ಬೇಕಿರಲಿಲ್ಲ. ಬರಿ ದೇಹಬೇಕಿತ್ತು" ಎಂದು ಒಂದು ರೀತಿಯಾಗಿ ನನ್ನತ್ತ ನೋಡಿದಾಗ, ನಾನು ಮುಂದುವರಿಸುವಂತೆ ಕೈ ಸನ್ನೆ ಮಾಡಿದೆ. "ಅವ್ನು ಜೊಲ್ಲು ಸುರುಸ್ಕೊಂಡು ನೋಡುವಾಗ ನಂಗೆ ಅಸಹ್ಯ ಆಗ್ತಿತ್ತು. ಅದ್ನ ಜಾಸ್ತಿ ಮಾಡುವಂತೆ ಮನೆಯಲ್ಲಿ ಯಾರೂ ಇಲ್ಲದಾಗ ನನ್ನನ್ನು ಬಲಾತ್ಕಾರ ಮಾಡಿಬಿಟ್ಟ" ಎಂದಳು. ನಾನು ಸುಮ್ಮನಿರದೆ, "ಅದ್ಹೇಗೆ ಬಲಾತ್ಕಾರ ಆಗುತ್ತೆ. ಮದ್ವೆನೋ ಪರ್ಮಿಷನ್ ತಗೊಂಡು ನಡಿಬೇಕಾಗಿದ್ದು, ಅದ್ಕಿಂತ ಸ್ವಲ್ಪ ಮುಂಚೆ ನಡಿತಷ್ಟೆ" ಎಂದೆ. ಅವಳು ನನ್ನತ್ತ ತೀಕ್ಷ್ಣವಾಗಿ ನೋಡುತ್ತಾ, "ಇಷ್ಟಕ್ಕೆ ವಿರುದ್ಧವಾಗಿ ನಡೆದ್ರೆ ಅವ್ನು ಗಂಡನೇ ಆಗಿದ್ರು ಅದು ಬಲಾತ್ಕಾರ ಅಂತನೇ ಅನ್ನಿಸೋದು ತಿಳಿತಾ" ಎಂದಳು ಧ್ವನಿಗೆ ಖಾರ ಬೆರಸಿ. "ಕೂಲ್, ಆ ಕೋಪನೆಲ್ಲ ನನ್ಮೇಲೆ ಹಾಕ್ಬೇಡಿ" ಎಂದೆ ಮೆಲ್ಲಗೆ ನಗುತ್ತಾ. "ಆಗಷ್ಟೆ ಸ್ಕೂಲ್ ಮುಗಿಸಿ ಕಾಲೇಜ್ ಸೇರಿದ್ದ ನನಗೆ ಅವ್ನ ವರ್ತನೆಯಿಂದ ಹಿಂಸೆಯಾಗ್ತಿತ್ತು. ಅವ್ನು ಅದ್ಕೆ ಬಲ್ವಂತ ಮಾಡುವಾಗೆಲ್ಲ ಅಳು ಬರೋದು. ಅಪ್ಪಅಮ್ಮನಿಗೆ ಹೇಳ್ಬೇಕು ಅನ್ನಿಸೋದು, ಹೇಳಲು ಭಯ. ಒಮ್ಮೆ ಧೈರ್ಯ ಮಾಡಿ 'ಅಮ್ಮ ಅವ್ನು ನಂಗೆ ಎಲ್ಲಂದ್ರಲ್ಲಿ ಟಚ್ ಮಾಡ್ತನೆ. ನಂಗೊಂತರ ಆಗುತ್ತೆ' ಎಂದು ಅರ್ಧ ಸುಳ್ಳು ಹೇಳಿದೆ. 'ವಯಸ್ಸಲ್ವೇನೆ' ಎಂದು ನಕ್ಕಳು. ನಾಳೆ ತನ್ನ ಮಗಳನ್ನು ವರಿಸುವವನು ಇಂದು ಮಗಳ ಮೈ ಕೈ ಮುಟ್ಟುವುದು ಘೋರಪಾಪವೇನಲ್ಲ ಎಂದು ಅಮ್ಮ ನಂಬಿದ್ದಳು.

ಇಪ್ಪತ್ತು ತುಂಬುವುದರೊಳಗೆ ಕಲಿಯಬಾರದ ಕಲೆಯನ್ನೆಲ್ಲ ಕಲಿತು ಸಕಲ ಕಲಾವಲ್ಲಭನಾಗಿದ್ದ. ಅವನನ್ನು ಹದ್ದುಬಸ್ತಿನಲ್ಲಿಡಲು ಮದುವೆಯೊಂದೆ ದಾರಿಯೆಂದು ತಿಳಿದ ಅತ್ತೆ ಆದಷ್ಟು ಬೇಗ ಮದುವೆ ಕಾರ್ಯವನ್ನು ಮುಗಿಸಿಬಿಡುವಂತೆ ಅಪ್ಪನನ್ನು ಒತ್ತಾಯಿಸತೊಡಗಿದರು. ಅಪ್ಪ ಅಸ್ತು ಎಂದುಬಿಟ್ಟರು. ನಾನು ಅವನನ್ನು ಮದುವೆಯಾಗುವುದಿಲ್ಲವೆಂದು ಅಮ್ಮನ ಕಿವಿಯಲ್ಲಿ ಮೆಲ್ಲನುಸುರಿದೆ. ಈ ಹಿಂದೆ ಅವನು ನನ್ನ ಜೊತೆ ಕಳೆದ ಕ್ಷಣಗಳನ್ನೆಲ್ಲ ನಾನು ಮರೆತುಬಿಡಲು ಸಿದ್ಧಳಾಗಿದ್ದೆ. ಆದರೆ, ಅಮ್ಮ ನಮ್ಮ ಬಡತನ ಹೇಳಿ, ಅವನಿಗಿದ್ದ ಮೂರೂವರೆ ಎಕರೆ ಭೂಮಿ ತೋರಿಸಿ, 'ಇನ್ನೇನುಬೇಕು' ಎಂದರು. ಹಾಗಾಗಿ ನನ್ನ ಪರೀಕ್ಷೆ ಮುಗಿಯುವ ಮುಂಚೆಯೇ ಹಸೆಮಣೆ ಏರಬೇಕಾಯಿತು. ಮದುವೆಯಾಗಲಿ, ಮೊದಲರಾತ್ರಿಯಾಗಲಿ ನಮ್ಮಿಬ್ಬರಿಗೂ ಯಾವ ರೀತಿಯ ಮಧುರ ಭಾವನೆ ಮತ್ತು ರೋಮಾಂಚನವನ್ನು ಉಳಿಸಿರಲಿಲ್ಲ. ನನ್ನ ವಿರೋಧದ ನಡುವೆಯೇ ಅವನು ನನ್ನೊಂದಿಗೆ ಹತ್ತಾರು ಬಾರಿ ಸುಖಿಸಿದ್ದ. ಗಡಿಬಿಡಿಯಿಂದ ನಡೆಯುತ್ತಿದ್ದದ್ದು, ಈಗ ಸಾವಕಾಶವಾಗಿ ಮತ್ತು ಇಷ್ಟ ಬಂದಾಗೆಲ್ಲ ನಡೆಯುತ್ತಿತ್ತು ಅಷ್ಟೆ. ಮದುವೆ ಮಾಡಿದರೆ ಮಗ ಸರಿಯಾಗುತ್ತಾನೆಂದು ತಿಳಿದು ಆತುರವಾಗಿ ಮದುವೆ ಮಾಡಿದ ಅತ್ತೆಗೆ, ಈಗ ಮಗನ ಜೊತೆಗೆ